ಫ್ಯಾಕ್ಸ್/Fax : 080-25586321
ಈಮೇಲ್/E-mail : ho@kspcb.gov.in
ವೆಬ್‌ಸೈಟ್/Website : http://kspcb.gov.in

☎ 25581383, 25589112
25588151, 25588270
25588142, 25586520

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

"ಪರಿಸರ ಭವನ", 1 ರಿಂದ 5ನೇ ಮಹಡಿಗಳು, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

ಸಂಖ್ಯೆ: ಮಾನಿಮ 19 ಜಾ.ಕೋ 2017-18 414. ದಿನಾಂಕ: 10 MAY 2017

**ವಿಶ್ವ ಪರಿಸರ ದಿನಾಚರಣೆ-2017ರನ್ನು ಆಚರಿಸುವ ಬಗ್ಗೆ ಮಂಡಳಿಯಲ್ಲಿ ದಿನಾಂಕ 08.05.2017ರಂದು ನಡೆದ ಮೂರನೇ ಪೂರ್ವಭಾವಿ ತಯಾರಿ ಸಭೆಯ ನಡವಳಿಗಳು**

**ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು**

1. ಶ್ರೀ ಲಕ್ಷ್ಮಣ್, ಅಧ್ಯಕ್ಷರು,
2. ಶ್ರೀ ಎಸ್.ಶಾಂತಪ್ಪ, ಭಾ.ಅ.ಸೇ, ಸದಸ್ಯ ಕಾರ್ಯದರ್ಶಿ
3. ಶ್ರೀ ಮೋಹನ್ ಕೃಷ್ಣ. ಬಿ.ಜಿ., ಮುಖ್ಯ ಪರಿಸರ ಅಧಿಕಾರಿ-1
4. ಶ್ರೀ. ಬಿ.ಎನ್ ರಮೇಶ್ ಕುಮಾರ್, ಮುಖ್ಯ ಪರಿಸರ ಅಧಿಕಾರಿ-2
5. ಶ್ರೀ ಡಿ.ಆರ್ ಕುಮಾರಸ್ವಾಮಿ, ಮುಖ್ಯ ಪರಿಸರ ಅಧಿಕಾರಿ-3
6. ಶ್ರೀ ಕೆ.ಎನ್. ಶಿವಲಿಂಗೇಗೌಡ, ಹಿರಿಯ ಪರಿಸರ ಅಧಿಕಾರಿ
7. ಶ್ರೀ ಎಂ. ಲಕ್ಷ್ಮಣ್, ಪ್ರಾದೇಶಿಕ ಹಿರಿಯ ಪರಿಸರ ಅಧಿಕಾರಿ
8. ಶ್ರೀ ವೆಂಕಟೇಶ್ ಶೇಖರ್, ಹಿರಿಯ ಪರಿಸರ ಅಧಿಕಾರಿ
9. ಶ್ರೀ ಪ್ರಭುದೇವ್, ಪ್ರಾದೇಶಿಕ ಹಿರಿಯ ಪರಿಸರ ಅಧಿಕಾರಿ, ಚಿತ್ರದುರ್ಗ
10. ಶ್ರೀ ಎನ್. ಲಕ್ಷ್ಮಣ್, ಪ್ರಾದೇಶಿಕ ಹಿರಿಯ ಪರಿಸರ ಅಧಿಕಾರಿ
11. ಶ್ರೀ ಆರ್. ಗುರುಮೂರ್ತಿ, ಪ್ರಾದೇಶಿಕ ಹಿರಿಯ ಪರಿಸರ ಅಧಿಕಾರಿ
12. ಶ್ರೀ ಸಿ.ಎಂ. ಸತೀಶ್, ಪ್ರಾದೇಶಿಕ ಹಿರಿಯ ಪರಿಸರ ಅಧಿಕಾರಿ
13. ಶ್ರೀ ಸೋಮನಾಥ್, ಮುಖ್ಯ ಹಣಕಾಸು ಅಧಿಕಾರಿ
14. ಶ್ರೀಮತಿ ಆರ್. ಕವಿತಾ ರಾಣಿ, ಆಡಳಿತಾಧಿಕಾರಿ,
15. ಶ್ರೀ ಕೆ. ರಾಜು, ಪರಿಸರ ಅಧಿಕಾರಿ, ಬೆಂಗಳೂರು ನಗರ ದಕ್ಷಿಣ
16. ಡಾ. ಆರ್. ಲಕ್ಷ್ಮೀನಾರಾಯಣ್, ಪರಿಸರ ಅಧಿಕಾರಿ, ಬೆಂಗಳೂರು ನಗರ ಪಶ್ಚಿಮ
17. ಶ್ರೀ ಬಿ.ಸಿ. ನಾರಾಯಣ್, ಎಇಇ, ಕಟ್ಟಡ ವಿಭಾಗ
18. ಶ್ರೀಮತಿ ವಿಜಿ ಕಾರ್ತಿಕೇಯನ್, ಪ.ಅ., ಬೆಂಗಳೂರು ನಗರ ಪೂರ್ವ
19. ಶ್ರೀ ಹೆಚ್.ಕೆ. ಮರಿಮಾದಯ್ಯ, ಪರಿಸರ ಅಧಿಕಾರಿ,
20. ಶ್ರೀ ಪಿ. ನಿರಂಜನ್, ಪರಿಸರ ಅಧಿಕಾರಿ,
21. ಶ್ರೀ ಎಸ್. ದಿನೇಶ್, ಪರಿಸರ ಅಧಿಕಾರಿ, ಬೊಮ್ಮನಹಳ್ಳಿ
22. ಶ್ರೀ ವಿ. ಸುನಿಲ್, ಉಪ ಪರಿಸರ ಅಧಿಕಾರಿ, ಪ್ರಾ.ಕ. ಆನೇಕಲ್
23. ಡಾ॥ ಹೆಚ್. ಆರ್. ಪುಟ್ಟರಾಜು, ಉಪ ಪರಿಸರ ಅಧಿಕಾರಿ, ಪ್ರಾ.ಕ. ಮಹದೇವಪುರ
24. ಡಾ॥ ಬಿ. ಮಾಧವಿ, ಉಪ ಪರಿಸರ ಅಧಿಕಾರಿ, ಪ್ರಾ.ಕ. ಆರ್.ಆರ್. ನಗರ

25. ಶ್ರೀ ಹೆಚ್.ಜಿ. ಭಾಸ್ಕರ್, ಉಪ ಪರಿಸರ ಅಧಿಕಾರಿ, ಪ್ರಾ.ಕ. ಯಲಹಂಕ
26. ಡಾ ಕೆ.ಎಮ್.ರಾಜು, ಸಹಾಯಕ ಪರಿಸರ ಅಧಿಕಾರಿ, ಸರ್ಜಾಪುರ
27. ಮಹೇಶ್ವರಿ ಸಿಂಗ್, ಸಹಾಯಕ ಪರಿಸರ ಅಧಿಕಾರಿ, ಪ್ರಾ.ಕ. ದಾಸರಹಳ್ಳಿ

********

ಪ್ರತಿ ವರ್ಷ ಆಚರಿಸುವಂತೆ ಈ ವರ್ಷವೂ ಸಹ ವಿಶ್ವ ಪರಿಸರ ದಿನಾಚರಣೆ–2017ನ್ನು ಆಚರಿಸುವ ಕುರಿತು ಮೂರನೇ ಪೂರ್ವಭಾವಿ ಸಭೆ ದಿನಾಂಕ: 08.05.2017ರಂದು ಸದಸ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಸದಸ್ಯ ಕಾರ್ಯದರ್ಶಿಗಳು ಎಲ್ಲರನ್ನು ಸ್ವಾಗತಿಸಿದರು. ಸಾರ್ವಜನಿಕ ಸಂಪರ್ಕಾಧಿಕಾರಿ, ಇವರು ಎರಡನೆಯ ಸಭೆಯ ನಡವಳಿಯಂತೆ ಪರಿಸರ ದಿನಾಚರಣೆ ಕುರಿತು ಮಾಡಬೇಕಾದ ತಯಾರಿ ಕುರಿತು ವಿವರ ನೀಡಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ 1.00 ಲಕ್ಷಕ್ಕಿಂತ ಅಧಿಕ ಸಸಿಗಳನ್ನು ನೆಡುವ ಕಾರ್ಯಕ್ರಮಗಳನ್ನು ಎಲ್ಲಾ ಕೈಗಾರಿಕಾ ಪ್ರದೇಶಗಳಲ್ಲಿ ಹಮ್ಮಿಕೊಳ್ಳಲು ಎಲ್ಲಾ ವಲಯ ಹಿರಿಯ ಪರಿಸರ ಅಧಿಕಾರಿ ಮತ್ತು ಪ್ರಾದೇಶಿಕ ಅಧಿಕಾರಿಗಳಿಗೆ ತಿಳಿಸಲಾಯಿತು. ಹಾಗೂ ಕಾರ್ಯಕ್ರಮ ನಡೆಸಿರುವ ಬಗ್ಗೆ ಛಾಯಾಚಿತ್ರದೊಂದಿಗೆ ಮಂಡಳಿಗೆ ವರದಿಯನ್ನು ನೀಡುವಂತೆ ತಿಳಿಸಲಾಯಿತು.

ಶ್ರೀ ಎಂ.ಕೆ. ಪ್ರಭುದೇವ್, ವಲಯ ಹಿರಿಯ ಪರಿಸರ ಅಧಿಕಾರಿ ಇವರು ದಿನಾಂಕ: 13.05.2017 ರಂದು ದಾವಣಗೆರೆಯಲ್ಲಿ ಎಸ್.ಎಸ್. ಸಭಾಂಗಣದಲ್ಲಿ ಜೀವ ವೈದ್ಯಕೀಯ ತ್ಯಾಜ್ಯ ನಿರ್ವಹಣೆಯ ಬಗ್ಗೆ ಒಂದು ದಿನದ ಕಾರ್ಯಗಾರವನ್ನು ಹಮ್ಮಿಕೊಂಡು ಅದರ ವ್ಯವಸ್ಥೆಯನ್ನು ಸಹ ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು. ಈ ಕಾರ್ಯಕ್ರಮಕ್ಕೆ ಮುಖ್ಯ ಪರಿಸರ ಅಧಿಕಾರಿ –1, 2 ಮತ್ತು 3 ಮತ್ತು ಎಲ್ಲಾ ಕೇಂದ್ರ ಕಛೇರಿಯ ಹಿರಿಯ ಪರಿಸರ ಅಧಿಕಾರಿಗಳು ಮತ್ತು ವಲಯ ಹಿರಿಯ ಪರಿಸರ ಅಧಿಕಾರಿಗಳು, ಚಿತ್ರದುರ್ಗ, ಕಲ್ಬುರ್ಗಿ, ಧಾರವಾಡ, ಬಳ್ಳಾರಿ ಮತ್ತು ಈ ವಿಭಾಗಗಳ ಪರಿಸರ ಅಧಿಕಾರಿಗಳು ಮತ್ತು ಉಪ ಪರಿಸರ ಅಧಿಕಾರಿಗಳು ಮತ್ತು ಸಹಾಯಕ ಪರಿಸರ ಅಧಿಕಾರಿಗಳು ತಪ್ಪದೇ ಕಾರ್ಯಕ್ರಮಕ್ಕೆ ಹಾಜರಾಗಬೇಕೆಂದು ಸೂಚಿಸಲಾಯಿತು. ಹಾಗೂ ತಮಗೆ ಕಛೇರಿಯ ವಾಹನವನ್ನು ಬಳಸಲು ಅನುಮತಿಸಿದ್ದು ಮತ್ತು ವಸತಿ ವ್ಯವಸ್ಥೆಯನ್ನು ನಿಯಮಾನುಸಾರ ಮಾಡಿಕೊಳ್ಳಲು ತಿಳಿಸಲಾಯಿತು.

ಈ ಸಂಬಂಧದಲ್ಲಿ ರೂ. 4.00 ಲಕ್ಷಗಳನ್ನು ಕಾರ್ಯಕ್ರಮದ ವೆಚ್ಚಕ್ಕೆ ಬಿಡುಗಡೆ ಮಾಡಲು ಮುಖ್ಯ ಹಣಕಾಸು ಅಧಿಕಾರಿಗಳಿಗೆ ಸೂಚಿಸಲಾಯಿತು.

ಇ–ತ್ಯಾಜ್ಯ / ಪ್ಲಾಸ್ಟಿಕ್ ಮತ್ತು ಇತರೆ ತ್ಯಾಜ್ಯದ ಬಗ್ಗೆ ಒಂದು ದಿನದ ಕಾರ್ಯಗಾರವನ್ನು ವಿಶ್ವ ಪರಿಸರ ದಿನಾಚರಣೆಯ ನಂತರ ಮೈಸೂರಿನಲ್ಲಿ ಹಿರಿಯ ಪರಿಸರ ಅಧಿಕಾರಿಗಳಾದ ಶ್ರೀ ಲಿಂಗರಾಜು ಇವರ ನೇತೃತ್ವದಲ್ಲಿ ಹಮ್ಮಿಕೊಳ್ಳುವುದು. ಈ ಕಾರ್ಯಕ್ರಮವನ್ನು ಮೈಸೂರಿನ ಮುಕ್ತ ವಿಶ್ವವಿದ್ಯಾಲಯದ ಆವರಣದಲ್ಲಿ ಜುಲೈ 2017 ರ ಮೂರನೇ ವಾರದಲ್ಲಿ ಹಮ್ಮಿಕೊಳ್ಳಲು ತೀರ್ಮಾನಿಸಲಾಯಿತು.

ವಿಶ್ವ ಪರಿಸರ ದಿನಾಚರಣೆಯ ಆಚರಣೆಯ ಸಂದರ್ಭದಲ್ಲಿ ಮೊದಲನೆಯದಾಗಿ ನೃತ್ಯ ಕಾರ್ಯಕ್ರಮವನ್ನು ಮಂಗಳೂರಿನ ಆಳ್ವ ಗ್ರೂಪ್ ಇವರಿಂದ ನಡೆಸಲು ತೀರ್ಮಾನಿಸಿ, ಈ ಕಾರ್ಯಕ್ರಮಕ್ಕೆ ಬೇಕಾದ ವ್ಯವಸ್ಥೆಯನ್ನು ಅನುಸರಿಸಲು ಸಾರ್ವಜನಿಕ ಸಂಪರ್ಕಾಧಿಕಾರಿಯವರಿಗೆ ಸೂಚಿಸಲಾಯಿತು ಮತ್ತು ಮಂಗಳೂರಿನ ಪ್ರಾದೇಶಿಕ ಅಧಿಕಾರಿಗಳಿಗೆ ತಿಳಿಸಿದರು. ಇದಕ್ಕೆ ಸಂಬಂಧಿಸಿದ ವೆಚ್ಚವನ್ನು ಮಂಗಳೂರು ಪ್ರಾದೇಶಿಕ ಕಛೇರಿಯಿಂದ ಭರಿಸುವಂತೆ ಸೂಚಿಸಲಾಯಿತು.

ಪತ್ರಿಕೆ, ಸುದ್ದಿ ಮಾಧ್ಯಮದವರಿಗೆ ಮಾಹಿತಿಯನ್ನು ನೀಡಲು ಮತ್ತು ವಾಯ್ಸ್ ರೆಕಾರ್ಡ್ ಮೆಸ್ಸೇಜ್ ನೀಡಲು ಕ್ರಮವಹಿಸಿರುವುದಾಗಿ ಸಾರ್ವಜನಿಕ ಸಂಪರ್ಕಾಧಿಕಾರಿಯವರು ತಿಳಿಸಿದರು.

ಸದಸ್ಯ ಕಾರ್ಯದರ್ಶಿಗಳು ವಿಶ್ವ ಪರಿಸರ ದಿನಾಚರಣೆಯ ತಯಾರಿ ಹಾಗೂ ಸಮಿತಿಗಳ ಕಾರ್ಯದ ಬಗ್ಗೆ ಈ ಕೆಳಕಂಡಂತೆ ಚರ್ಚಿಸಲಾಯಿತು.

1. **ಅತಿಥಿಗಳ ಆಮಂತ್ರಣ**

ಡಾ॥ ಆರ್.ಲಕ್ಷ್ಮೀನಾರಾಯಣ್, ಪ.ಅ., ಪ್ರಾ.ಕ. ಬೆಂಗಳೂರು ನಗರ ಪಶ್ಚಿಮ ಹಾಗೂ ಸಮಿತಿ ಸಂಚಾಲಕರು ಇವರು ವಿಶ್ವ ಪರಿಸರ ದಿನಾಚರಣೆಯ ಆಹ್ವಾನ ಪತ್ರಿಕೆಗಳನ್ನು ಮುದ್ರಣಗೊಂಡ ನಂತರ ಕಾರ್ಯಕ್ರಮಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹಾಗು ಮಾನ್ಯ ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖಾ ಸಚಿವರ ಭಾಗಹಿಸುವಿಕೆ ಕೋರಲು ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

2. **ಆಹ್ವಾನ ಪತ್ರಿಕೆ ವಿತರಣೆ ಮೇಲುಸ್ತುವಾರಿ**

ಶ್ರೀ ಶಿವಲಿಂಗೇಗೌಡ, ಸಮಿತಿಯ ಸಂಚಾಲಕರು, ಹಿ.ಪ.ಅ., ಕೇಂದ್ರ ಕಛೇರಿ ಇವರು ವಿಶ್ವ ಪರಿಸರ ದಿನಾಚರಣೆಯ ಆಹ್ವಾನ ಪತ್ರಿಕೆಗಳು ಮುದ್ರಣಗೊಂಡ ನಂತರ ಸಂಬಂಧಿಸಿದ ಎಲ್ಲಾ ಅತಿಥಿಗಳಿಗೆ ಹಾಗೂ ಕೈಗಾರಿಕೆಗಳಿಗೆ/ ಸಂಘ ಸಂಸ್ಥೆಗಳಿಗೆ ವಿತರಿಸುವ ಕಾರ್ಯವನ್ನು ಮಾಡಲಾಗುವುದು ಎಂದು ತಿಳಿಸಿದರು.

3. **ಚಿತ್ರ ಕಲಾ ಮತ್ತು ಪ್ರಬಂಧ ಸ್ಪರ್ಧೆ**

ದಿನಾಂಕ: 02.06.2017 (ಶುಕ್ರವಾರ) ಬೆಳಿಗ್ಗೆ 10.00 ಘಂಟೆಯಿಂದ ಮಧ್ಯಾಹ್ನ 1.30 ಘಂಟೆಯವರೆಗೆ ಕಬ್ಬನ್ ಪಾರ್ಕ್ ಬಾಲಭವನದ ಆವರಣದಲ್ಲಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲಾ ಮಕ್ಕಳಿಗೆ ಪೇಂಟಿಂಗ್ ಸ್ಪರ್ಧೆ ಹಾಗೂ ಮಾಧ್ಯಮಿಕ ಮತ್ತು ಪ್ರೌಢಶಾಲಾ ಮಕ್ಕಳಿಗೆ ಪ್ರಬಂಧ ಸ್ಪರ್ಧೆಯನ್ನು ನಡೆಸಲು ಎಲ್ಲಾ ಕ್ರಮ ಕೈಗೊಂಡಿರುವುದಾಗಿ ತಿಳಿಸಿದರು ಹಾಗೂ ಈ ಕಾರ್ಯಕ್ರಮಕ್ಕೆ ತಲಾ ರೂ. 50,000/- ಗಳನ್ನು ಮಂಡಳಿಯ ಕೇಂದ್ರ ಕಛೇರಿಯಿಂದ ಬಿಡುಗಡೆ ಮಾಡಲು ಮುಖ್ಯ ಹಣಕಾಸು ಅಧಿಕಾರಿಗಳಿಗೆ ಸೂಚಿಸಲಾಯಿತು.

4. **ಪರಿಸರ ಜಾಥಾ**

ವಿಶ್ವ ಪರಿಸರ ದಿನಾಚರಣೆ-2017 ರ ಅಂಗವಾಗಿ ಪರಿಸರ ಜಾಥಾ ಕಾರ್ಯಕ್ರಮಕ್ಕೆ ಅಗತ್ಯ ವ್ಯವಸ್ಥೆಯನ್ನು ಮಾಡಿಕೊಂಡಿರುವುದಾಗಿ ತಿಳಿಸಿದರು ಹಾಗೂ ಈ ಕಾರ್ಯಕ್ರಮಕ್ಕೆ 1000 ವಿದ್ಯಾರ್ಥಿಗಳನ್ನು ಕರೆದುಕೊಂಡು ಬರುವಂತೆ ಹಿರಿಯ ಪರಿಸರ ಅಧಿಕಾರಿ, ಉತ್ತರ ಮತ್ತು ಪ್ರಾದೇಶಿಕ ಅಧಿಕಾರಿ, ಯಲಹಂಕ ರವರಿಗೆ ಸೂಚಿಸಲಾಯಿತು.

5. **ಸಭಾಂಗಣ ಹಾಗೂ ವೇದಿಕೆ ಸಜ್ಜುಗೊಳಿಸುವುದು ಹಾಗೂ ವೇದಿಕೆ ನಿರ್ವಹಣೆ**

ಶ್ರೀ ಬಿ.ಸಿ. ನಾರಾಯಣ್, ಎಇಇ, ಇವರು ಸಭಾಂಗಣ ಮತ್ತು ವೇದಿಕೆ ಸಜ್ಜುಗೊಳಿಸುವ ಸಲುವಾಗಿ (Item Wise) ಟೆಂಡರ್ ಕರೆಯಲು, ಕ್ರಮ ಕೈಗೊಂಡಿರುವ ಬಗ್ಗೆ ವಿವರಣೆಯನ್ನು ನೀಡಿದರು. ಈ ಸಂಬಂಧದಲ್ಲಿ ಊಟದ ವ್ಯವಸ್ಥೆಯ ಬಗ್ಗೆ ಶ್ರೀ ಗುರುಮೂರ್ತಿ, ಹಿರಿಯ ಪರಿಸರ ಅಧಿಕಾರಿ ಇವರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲು ಸೂಚಿಸಲಾಯಿತು ಹಾಗೂ ವೇದಿಕೆ

ಅಲಂಕಾರದ ಬಗ್ಗೆ ಮಾನ್ಯ ಅಧ್ಯಕ್ಷರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲು ಸೂಚಿಸಿದರು. ಈ ಸಂಬಂಧದಲ್ಲಿ ಈ ವರ್ಷದ ವಿಶ್ವ ಪರಿಸರ ದಿನಾಚರಣೆಯ ವಿಷಯ "Connecting People to Nature" ಕುರಿತಂತೆ ವೇದಿಕೆ / ಅಲಂಕಾರವನ್ನು Green Concept ನಂತೆ ಸಿದ್ಧಪಡಿಸಲು ಸೂಚಿಸಲಾಯಿತು.

6. **ಕಾರ್ಯಕ್ರಮ ನಿರೂಪಣಾ ಸಮಿತಿ**

ವಿಶ್ವ ಪರಿಸರ ದಿನಾಚರಣೆಯ ಕಾರ್ಯಕ್ರಮದ ನಿರೂಪಣೆಗೆ ಸಂಬಂಧಿಸಿದಂತೆ ಕ್ರಮವಹಿಸಿರುವುದಾಗಿ ಶ್ರೀ ಮೋಹನ್ ಕೃಷ್ಣ, ಮುಖ್ಯ ಪರಿಸರ ಅಧಿಕಾರಿ, ಇವರು ತಿಳಿಸಿದರು.

7. **ಸಮಾರಂಭಕ್ಕೆ ಅಗತ್ಯ ಭದ್ರತೆ ಮತ್ತು ಅನಿರ್ಬಂದಿತ ವಿದ್ಯುತ್ ಪೂರೈಕೆ**

ಶ್ರೀ ಎನ್. ಲಕ್ಷ್ಮಣ್, ವಲಯ ಹಿ.ಪ.ಅ., ಸಮಿತಿಯ ಸಂಚಾಲಕರು ಇವರು ಸಮಾರಂಭದ ದಿನದಂದು ಅಗತ್ಯ ಭದ್ರತೆ ಮತ್ತು ಅನಿರ್ಬಂಧಿತ ವಿದ್ಯುತ್ ವ್ಯವಸ್ಥೆಯನ್ನು ಮಾಡಲು ಕ್ರಮ ಕೈಗೊಳ್ಳಲಾಗಿದೆಂದು ತಿಳಿಸಿದರು.

8. **ಸಮಾರಂಭಕ್ಕೆ ಆಗಮಿಸುವ ಅತಿಥಿಗಳಿಗೆ ಶಿಷ್ಟಾಚಾರ ಅಧಿಕಾರಿಗಳ ಹಾಗೂ ವಾಹನ ವ್ಯವಸ್ಥೆ**

ಶ್ರೀ ಎಸ್. ವೆಂಕಟೇಶ್ ಶೇಖರ್, ಹಿ.ಪ.ಅ, ಕೇಂದ್ರ ಕಛೇರಿ, ಸಮಿತಿಯ ಸಂಚಾಲಕರು ಇವರು ಸಮಾರಂಭಕ್ಕೆ ಆಗಮಿಸುವ ಅತಿಥಿಗಳಿಗೆ ಸೂಕ್ತ ಶಿಷ್ಟಾಚಾರ ಅಧಿಕಾರಿಗಳ ವ್ಯವಸ್ಥೆ ಮತ್ತು ವಾಹನ ವ್ಯವಸ್ಥೆಯನ್ನು ನಿರ್ವಹಿಸಲಾಗುವುದೆಂದು ತಿಳಿಸಿದರು.

9. **ಸಮಾರಂಭದ ದಿನದಂದು ಸಭಾಂಗಣಕ್ಕೆ ಹಾಗೂ ವೇದಿಕೆಗೆ ಮುಖ್ಯ ಅತಿಥಿಗಳನ್ನು ಆಹ್ವಾನಿಸುವ ವ್ಯವಸ್ಥೆ**

ಶ್ರೀ ರಮೇಶ್ ಕುಮಾರ್, ಮು.ಪ.ಅ., ಕೇಂದ್ರ ಕಛೇರಿ, ಸಮಿತಿಯ ಸಂಚಾಲಕರು ಇವರು ಸಮಾರಂಭಕ್ಕೆ ಆಗಮಿಸುವ ಮುಖ್ಯ ಅತಿಥಿಗಳನ್ನು ವೇದಿಕೆಗೆ ಆಹ್ವಾನಿಸುವ ಕಾರ್ಯವನ್ನು ನಿರ್ವಹಿಸಲಾಗುವುದೆಂದು ತಿಳಿಸಿದರು.

10. **ಶಾಲಾ ಮಕ್ಕಳು, ಎನ್.ಸಿ.ಸಿ., ಸ್ಕೌಟ್ಸ್ ಮತ್ತು ಗೈಡ್ಸ್‌ಗಳನ್ನು ಕಾರ್ಯಕ್ರಮಕ್ಕೆ ಕರೆತರುವ ವ್ಯವಸ್ಥೆ**

ಶ್ರೀ ಎನ್. ಲಕ್ಷ್ಮಣ್, ಹಿ.ಪ.ಅ., ಬೆಂಗಳೂರು ದಕ್ಷಿಣ, ಸಮಿತಿಯ ಸಂಚಾಲಕರು ಇವರು ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಕಾರ್ಯಕ್ರಮಕ್ಕೆ 500 ಎನ್.ಸಿ.ಸಿ., ಸ್ಕೌಟ್ಸ್ ಮತ್ತು ಗೈಡ್ಸ್‌ಗಳನ್ನು ಸ್ಥಳಕ್ಕೆ ಬಸ್ಸಿನಲ್ಲಿ ಕರೆತರಲಾಗುವುದೆಂದು ತಿಳಿಸಿದರು.

11. **ನೆನಪಿನ ಕಾಣಿಕೆ ಮತ್ತು ಪರಿಸರ ಪ್ರಶಸ್ತಿ ವಿಜೇತರಿಗೆ ಪ್ರಮಾಣ ಪತ್ರ ವಿತರಣೆ**

ಶ್ರೀ ಎಂ. ಲಕ್ಷ್ಮಣ್, ಹಿ.ಪ.ಅ., ಬೆಂಗಳೂರು ನಗರ, ಸಮಿತಿಯ ಸಂಚಾಲಕರು ಇವರು ಸರ್ಕಾರದಿಂದ ನೀಡುವ ಈ ಸಾಲಿನ ಪರಿಸರ ಪ್ರಶಸ್ತಿಗೆ ಸಂಬಂಧಿಸಿದ ಪಾರಿತೋಷಕಗಳನ್ನು, ಅತಿಥಿಗಳಿಗೆ ನೀಡುವ ನೆನಪಿನ ಕಾಣಿಕೆಗಳನ್ನು ಹಾಗೂ 4 ಶಾಲೆಗಳಿಗೆ ಅತ್ಯುತ್ತಮ ಪರಿಸರ ಮಿತ್ರ

ಶಾಲಾ ಪ್ರಶಸ್ತಿಗಳನ್ನು (4 ಪಾರಿತೋಷಕಗಳನ್ನು) ಕಾವೇರಿ ಎಂಪೋರಿಯಂ ನಿಂದ ಖರೀದಿಸಲು ಸೂಚಿಸಲಾಯಿತು. ಹಾಗೂ ಪ್ರಮಾಣ ಪತ್ರಗಳನ್ನು ಸಹ ಮುದ್ರಣ ಮಾಡಿಸಲು ಸೂಚಿಸಲಾಯಿತು.

**12.ಸಮಾರಂಭದ ದಿನದಂದು ಊಟೋಪಚಾರದ ವ್ಯವಸ್ಥೆ**

ಶ್ರೀ ಆರ್. ಗುರುಮೂರ್ತಿ, ಪ್ರಾದೇಶಿಕ ಹಿ.ಪ.ಅ., ಬೆಂಗಳೂರು ನಗರ ವಿಭಾಗ, ಸಮಿತಿಯ ಸಂಚಾಲಕರು ಇವರು ವಿಶ್ವ ಪರಿಸರ ದಿನಾಚರಣೆಯ ಸಮಾರಂಭದ ದಿನದಂದು ಊಟೋಪಚಾರದ ವ್ಯವಸ್ಥೆಯ ಸಲುವಾಗಿ ಟೆಂಡರ್ ಕರೆಯಲಾಗಿದೆ ಎಂದು ತಿಳಿಸಿದರು.

**13.ವಿಶ್ವ ಪರಿಸರ ದಿನಾಚರಣೆಯ ಮುಂಚಿತವಾಗಿ ಮಾಧ್ಯಮವರ್ಗದವರೊಂದಿಗೆ ಕೇಂದ್ರ ಕಛೇರಿಯಲ್ಲಿ ಸಭೆಯ ವ್ಯವಸ್ಥೆ ಹಾಗೂ ಮಂಡಳಿಯ ಅಂತರ್ಜಾಲದಲ್ಲಿ ಸಮಾರಂಭದ ಬಗ್ಗೆ ಮಾಹಿತಿಯನ್ನು ಪ್ರಕಟಣೆ ಮಾಡಲು**

ಮಾಧ್ಯಮ ವರ್ಗದವರೊಂದಿಗೆ ಸಮನ್ವಯಿಸಿ, ವಿಶ್ವ ಪರಿಸರ ದಿನಾಚರಣೆಯ ಕುರಿತು ಪತ್ರಿಕಾ ಸಭೆಗಳನ್ನು ಕರೆದು ಪತ್ರಿಕಾ ಪ್ರಕಟಣೆಗಳನ್ನು ನೀಡಲು ಕ್ರಮವಹಿಸಲಾಗಿದೆ ಎಂದು ತಿಳಿಸಿದರು.

**14.ವಸ್ತು ಪ್ರದರ್ಶನ ವ್ಯವಸ್ಥೆ ಸಮಿತಿ**

ಶ್ರೀ ಡಿ.ಆರ್.ಕುಮಾರಸ್ವಾಮಿ, ಮುಖ್ಯ ಪರಿಸರ ಅಧಿಕಾರಿ, ಸಮಿತಿ ಸಂಚಾಲಕರು ಇವರು ವಿಶ್ವ ಪರಿಸರ ದಿನಾಚರಣೆ ಸಂದರ್ಭದಲ್ಲಿ ವ್ಯವಸ್ಥೆ ಮಾಡುವ ವಸ್ತು ಪ್ರದರ್ಶನದ ಸಲುವಾಗಿ ಮಳಿಗೆಗಳ ವ್ಯವಸ್ಥೆ ಮತ್ತು ಇದಕ್ಕೆ ಸಂಬಂಧಿಸಿದ ಸಂಸ್ಥೆಗಳು ಮತ್ತು ಇಲಾಖೆಗಳ ಜೊತೆ ಸಮನ್ವಯ ಮಾಡಿಕೊಂಡು ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ತಿಳಿಸಿದರು.

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ ಹೊರತುಪಡಿಸಿ ರಾಜ್ಯಾದ್ಯಂತ ಇತರೆ ಜಿಲ್ಲೆಗಳಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲು ಪ್ರತಿ ಪ್ರಾದೇಶಿಕ ಕಛೇರಿಗೆ ರೂ. 25,000/- ಗಳ ಜೊತೆಗೆ ಹೆಚ್ಚುವರಿಯಾಗಿ ತಲಾ ರೂ. 5,000/- ಗಳ ಅನುದಾನವನ್ನು ಬಿಡುಗಡೆ ಮಾಡುವಂತೆ ಸೂಚಿಸಲಾಯಿತು.

ಯು.ಎನ್.ಇ.ಪಿ. ವತಿಯಿಂದ ಪ್ರಕಟಿಸಿದ ವಿಷಯ "Connecting People to Nature" ಕುರಿತಂತೆ ವಿಶ್ವ ಪರಿಸರ ದಿನಾಚರಣೆ -2017 ಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಸಂಪರ್ಕಾಧಿಕಾರಿ ವಿಭಾಗದಿಂದ ಆಹ್ವಾನ ಪತ್ರಿಕೆ, ಜಾಹೀರಾತು, ಕರಪತ್ರ ಬಿತ್ತಿ ಪತ್ರ, ಹೆದ್ದಾರಿ ಫಲಕಗಳ ಮತ್ತು ವೇದಿಕೆ ಹಿನ್ನಲೆಯ ವಿನ್ಯಾಸವನ್ನು ಮಾಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ವಿಶ್ವ ಪರಿಸರ ದಿನಾಚರಣೆಯಂದು ನಡೆಯುವ ಪರಿಸರ ಜಾಥಾ ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ಮಂಡಳಿಯಿಂದ ಈಗಾಗಲೇ ತೀರ್ಮಾನಿಸಿದಂತೆ 2000 ಗಳ ಬದಲಾಗಿ 3000 ಹಸಿರು ಬಣ್ಣದ ಟಿ- ಶರ್ಟ್ ಹಾಗೂ ಟೋಪಿಗಳನ್ನು ಖರೀದಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಶ್ರೀ ಎಂ. ಲಕ್ಷ್ಮಣ್, ಹಿರಿಯ ಪರಿಸರ ಅಧಿಕಾರಿ ಮತ್ತು ಡಾ॥ ಲಕ್ಷ್ಮೀನಾರಾಯಣ್, ಪ್ರಾದೇಶಿಕ ಅಧಿಕಾರಿ, ಬೆಂಗಳೂರು ನಗರ ಪಶ್ಚಿಮ ಇವರು ಕ್ರಮವಹಿಸುವುದು.

ಪರಿಸರ ಭವನ ಮತ್ತು ನಿಸರ್ಗ ಭವನದಿಂದ ಕಾರ್ಯಕ್ರಮಕ್ಕೆ ಭಾಗವಹಿಸುವ ಅಧಿಕಾರಿ / ನೌಕರರಿಗೆ ಕೃಷಿ ವಿಶ್ವವಿದ್ಯಾಲಯಕ್ಕೆ ಹೋಗಲು ಮತ್ತು ವಿಶ್ವವಿದ್ಯಾಲಯದ ಪ್ರವೇಶದ್ವಾರದಿಂದ ಕಾರ್ಯಕ್ರಮ ನಡೆಯುವ ಸಭಾಂಗಣಕ್ಕೆ ಸಾರಿಗೆ ವ್ಯವಸ್ಥೆಯನ್ನು ಮಾಡಲು ಆಡಳಿತಾಧಿಕಾರಿಗಳಿಗೆ ತಿಳಿಸಲಾಯಿತು.

ಪರಿಸರ ಮಿತ್ರ ಶಾಲಾ ಕಾರ್ಯಕ್ರಮ 2016-17 ರಲ್ಲಿ ಹಸಿರು ಶಾಲೆ ಪ್ರಶಸ್ತಿ ಪಡೆದ ಬೆಂಗಳೂರು, ಮೈಸೂರು ಜಿಲ್ಲೆ, ಕಲ್ಬುರ್ಗಿ ಜಿಲ್ಲೆ ಮತ್ತು ಬೆಳಗಾವಿ ಜಿಲ್ಲೆಯ ಶಾಲೆಗಳಲ್ಲಿ ಅತ್ಯುತ್ತಮ 4 ಹಸಿರು ಶಾಲೆಗಳನ್ನು ಗುರುತಿಸಲು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ರವರಿಗೆ ಹಾಗೂ ಸಂಬಂಧಪಟ್ಟ ಪ್ರಾದೇಶಿಕ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು. ಈ ಸಂಬಂಧದಲ್ಲಿ ಪ್ರಾದೇಶಿಕ ಹಿರಿಯ ಪರಿಸರ ಅಧಿಕಾರಿಗಳಿಗೆ ಜವಾಬ್ದಾರಿಗೊಳಿಸಲಾಗಿದೆ.

ಸದಸ್ಯ ಕಾರ್ಯದರ್ಶಿರವರು ಮೇಲಿನ ವಿವರಗಳನ್ನು ಪರಾಮರ್ಶಿಸಿ ಶ್ರೀ ಉದಯ್ ಕುಮಾರ್, ಹಿ.ಪ.ಅ. ಹಾಗೂ ಸಂಚಾಲಕರು ಸಮನ್ವಯ ಉಪಸಮಿತಿ ಇವರಿಗೆ ಪ್ರತಿ ವಾರವೂ ಎಲ್ಲಾ ಉಪ ಸಮಿತಿಗಳ ಜೊತೆ ಸಂಪರ್ಕ ಸಾಧಿಸಿ ಪ್ರತಿ 15 ದಿನಕ್ಕೊಮ್ಮೆ ಮಾನ್ಯ ಅಧ್ಯಕ್ಷರಿಗೆ ವರದಿ ನೀಡಲು ಸೂಚಿಸಿದರು. ಶ್ರೀ ಡಿ.ಆರ್. ಕುಮಾರಸ್ವಾಮಿ, ಮು.ಪ.ಅ. ರವರು NGO ಗಳು ಹಾಗೂ ಬೆಂಗಳೂರಿನ ಪರಿಸರ ಅಧಿಕಾರಿಗಳ ಜೊತೆ ಸಮನ್ವಯ ಸಾಧಿಸಿ ಕಾರ್ಯಕ್ರಮ ಯಶಸ್ವಿಯಾಗುವಂತೆ ನೋಡಿಕೊಳ್ಳಲು ಸೂಚಿಸಿದರು ಹಾಗೂ ಮುಂದಿನ ಸಭೆಯನ್ನು ದಿನಾಂಕ: 15.05.2017 ಮಧ್ಯಾಹ್ನ 3.00ಗಂಟೆಗೆ 3ನೇ ಮಹಡಿ ಸಭಾಂಗಣ ಪರಿಸರ ಭವನದಲ್ಲಿ ನಡೆಸಲು ತಿರ್ಮಾನಿಸಲಾಯಿತು.

ಸದಸ್ಯ ಕಾರ್ಯದರ್ಶಿ

ಪ್ರತಿಯನ್ನು:

1. ಮಾನ್ಯ ಅಧ್ಯಕ್ಷರ ಆಪ್ತಕಾರ್ಯದರ್ಶಿಗಳ ಮಾಹಿತಿಗಾಗಿ ಹಾಗೂ ಅಧ್ಯಕ್ಷರ ಗಮನಕ್ಕೆ ತರುವ ಸಲುವಾಗಿ
2. ಸದಸ್ಯ ಕಾರ್ಯದರ್ಶಿಗಳ ಆಪ್ತಕಾರ್ಯದರ್ಶಿಗಳ ಮಾಹಿತಿಗಾಗಿ ಹಾಗೂ ಸದಸ್ಯ ಕಾರ್ಯದರ್ಶಿಗಳ ಗಮನಕ್ಕೆ ತರುವ ಸಲುವಾಗಿ
3. ಮುಖ್ಯ ಪರಿಸರ ಅಧಿಕಾರಿಗಳು 1, 2 ಮತ್ತು 3/ ಮುಖ್ಯ ಹಣಕಾಸು ಅಧಿಕಾರಿ/ಆಡಳಿತ ಅಧಿಕಾರಿ/ ಮುಖ್ಯ ವೈಜ್ಞಾನಿಕ ಅಧಿಕಾರಿ 1 ಮತ್ತು 2
4. ಸಂಬಂಧ ಪಟ್ಟ ಎಲ್ಲಾ ಅಧಿಕಾರಿಗಳಿಗೆ
5. ಸೂಚನಾ ಫಲಕ
6. ಇ ಗವರ್ನೆಸ್ ವಿಭಾಗಕ್ಕೆ ಮಂಡಳಿಯ ವೆಬ್ ಸೈಟ್‌ನಲ್ಲಿ ಪ್ರಕಟಿಸಲು